ಚಿಕ್ಕೋಡಿ ತಾಲ್ಲೂಕಿನಲ್ಲಿ ಗುರುತಿಸಲಾಗದಂತಹ ಶವ

೯೯೨. ಶ್ರೀ ವೀರಕುಮಾರ ಎ. ಪಾಟೀಲ್ (ನಿಪ್ಪಾಣಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕೋಡಿ ತಾಲ್ಲೂಕಿನ ಬೂದಿಹಾಳ್ ಮತ್ತು ಕುಡ್ನಿ ಗ್ರಾಮಗಳ ಸರಹದ್ದಿನಲ್ಲಿ ಒಂದು ಅಪರಿಚಿತ ಶವ ಕಂಡು ಬಂದಿರುವುದು ನಿಜವಲ್ಲವೇ?

ಆ) ಸದರಿ ಶವವನ್ನು ಗುರುತಿಸಲು ಪೋಲೀಸ್ ಇಲಾಖೆ ತೆಗೆದುಕೊಂಡ ಕ್ರಮವೇನು ?

ಇ) ಅವರು ಮರಣಕ್ಕೆ ಕಾರಣವನ್ನು ತನಿಖೆ ಮಾಡಿದ್ದಾರೆಯೇ ?

ಈ) ಇಲ್ಲದಿದ್ದಲ್ಲಿ, ಇದು ಕೊಲೆಯೇ ಅಥವಾ ಆತ್ಮಹತ್ಯೆಯೇ ಎಂಬುದನ್ನು ಕಂಡು ಹಿಡಿಯಲು ಕ್ರಮ ತೆಗೆದುಕೊಳ್ಳುವರೇ ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

ಅ) ಬೂದಿಹಾಳ್‌ನ ವ್ಯಾಪ್ತಿಯಲ್ಲಿ ಒಂದು ಶವ ಸಿಕ್ಕಿರುವುದು ನಿಜ.

ಆ) ದಿನಾಂಕ ೪-೧-೮೮ರಂದು ಬೂದಿಹಾಳ್ ಹಳ್ಳಿಯ ಶ್ರೀ ಶಿವಾಜಿ ಬಾಗೇವಾಡಿ ಪಾಟೀಲ್ ರವರು ಬೂದಿಹಾಳ ವ್ಯಾಪ್ತಿಯಲ್ಲಿ ಒಂದು ಅಪರಿಚಿತ ಶವವು ಕಂಡುಬಂದ ಬಗ್ಗೆ ಒಂದು ದೂರು ಕೊಟ್ಟಿದ್ದಾರೆ. ಈ ದೂರಿನ ಮೇರೆಗೆ ನಿಪ್ಪಾಣಿ ಪೋಲೀಸ್ ಠಾಣೆಯ ಪಿ.ಎಸ್.ಐ.ರವರು ಯು.ಡಿ.ಆರ್. ನಂ. ೧,೮೮ ಸಿ.ಆರ್.ಪಿ.ಸಿ. ಕಲಂ ೧೭೪ ರಂತೆ ದಾಖಲು ಮಾಡಿಕೊಂಡು ನಂತರ ಸ್ಥಳಕ್ಕೆ ಧಾವಿಸಿ ಶವದ ಮಹಜರ್ ಮಾಡಿರುತ್ತಾರೆ. ಶ್ರೀ ರಾಮಚಂದ್ರ ಜಂಪಾನ ಪಾಟೀಲ್ ಎಂಬುವರು ಶವವನ್ನು ತಮ್ಮ ಮಗ ಶ್ರೀ ಮಾರುತಿ ೨೫ ವರ್ಷ ಇವರದ್ದು ಎಂದು ಗುರುತಿಸಿದ್ದಾರೆ.

ಇ) ತನಿಖೆಯ ಕಾಲದಲ್ಲಿ ಶವವಿದ್ದ ಸ್ಥಳದಲ್ಲಿ ವಿಷದ ಸೀಸೆ ಎಂದು ಸಂಶಯಿಸಿದ ಒಂದು ಸೀಸೆ ಸಿಕ್ಕಿದೆ. ಇದು ವಿಷ ಸೇವನೆಯಿಂದ ಆದ ಮರಣವೆಂದು ಸಂಶಯಿಸಲಾಗಿದೆ. ಮೃತರ ವಿಸೆರಾವನ್ನು ಸಂಗ್ರಹಿಸಿ ರಾಸಾಯನಿಕ ತಜ್ಞರ ಪರೀಕ್ಷೆಗಾಗಿ ಕಳಿಸಲಾಗಿದೆ ಮತ್ತು ಫಲಿತಾಂಶಕ್ಕಾಗಿ ಕಾಯಲಾಗುತ್ತಿದೆ.

ಈ) ಮೇಲೆ ತಿಳಿಸಿದಂತೆ ಆ ತನಿಖೆಗಾಗಿ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ. ತಜ್ಞರ ವರದಿ ಮತ್ತು ಶವ ಪರೀಕ್ಷೆ ಮಾಡಿದ ವೈದ್ಯರ ಅಭಿಪ್ರಾಯ ಬಂದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಅಂತರರಾಜ್ಯ ಪ್ರಯಾಣಿಕರ ವಾಹನಗಳು

೯೯೯. ಶ್ರೀ ಹೆಚ್. ಬಿ. ದ್ಯಾವರಪ್ಪ (ಮಾಲೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಾಲೂರು ನಗರವು ತಮಿಳುನಾಡು ಗಡಿಯಲ್ಲಿದ್ದು ಅಂತರರಾಜ್ಯ ಸಾರಿಗೆ ಪ್ರಯಾಣಿಕರ ವಾಹನಗಳು ಓಡಾಡುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ ಅಂತರರಾಜ್ಯ ಮತ್ತು ಸ್ಥಳೀಯ ಸಂಚಾರಿ ವ್ಯವಸ್ಥೆಯ ಅನುಕೂಲಕ್ಕಾಗಿ ಮಾಲೂರಿನಲ್ಲಿ ಒಂದು ಬಸ್ಸು ಡಿಪೋ ಪ್ರಾರಂಭಿಸಲಾಗುವುದೆ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಮೂಲೂರಿನಿಂದ ತಮಿಳುನಾಡಿಗೆ ಇತ್ತೀಚೆಗೆ ತನ್ನ ಕಾರ್ಯಾಚರಣೆ ಪ್ರಾರಂಭಿಸಿದೆ.

ಆ) ಇಲ್ಲ.